

# ಟ್ರಾನ್ಸ್‌ಜೆಂಡರ್‌ಗಳ ಬದುಕಿನ ಸ್ವಗತ

**ಟ್ರಾನ್ಸ್‌ಜೆಂಡರ್‌ಗಳ ಬದುಕಿನ ವಿವರಗಳು ಎಷ್ಟು ಅನಾಮಿಕವೋ ಅಷ್ಟೇ ಸಂಕಷ್ಟದ್ದೂ ಆಗಿವೆ. ಅವರ ಬದುಕಿನ ಸ್ವಗತದ ಧ್ವನಿಯನ್ನು ಹಿಡಿದಂತಿರುವ ಈ ಕಿರುಚಿತ್ರ, ಶಿಥಿಲ ಕಥನಹಂದರದಿಂದ ಸೊರಗಿದೆ.**

■ ಗೌರಿ

ಟ್ರಾನ್ಸ್‌ಜೆಂಡರ್‌ಗಳ ಬದುಕನ್ನು ಬಿಂಬಿಸುವ ಹಲವು ಸಿನಿಮಾಗಳು ಬಂದಿವೆ. ಕನ್ನಡದ 'ನಾನು ಅವನಲ್ಲ, ಅವಳು' ಸಿನಿಮಾವನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಟ್ರಾನ್ಸ್‌ಜೆಂಡರ್ ಬದುಕಿನ ಸಂಕಟಗಳನ್ನು ಆ ಸಿನಿಮಾ ಬಹುಸೂಕ್ಷ್ಮವಾಗಿ ಮತ್ತು ಅಷ್ಟೇ ಪ್ರಭಾವಶಾಲಿಯಾಗಿಯೂ ಬಿಂಬಿಸಿತ್ತು.

ಸಾಹಿ ಮಾಂಕು ನಿರ್ದೇಶನದ 'ಕಿನ್ನರ್' ಎಂಬ ಕಿರುಚಿತ್ರವೂ ಇದೇ ವಸ್ತುವನ್ನು ಒಳಗೊಂಡಿದೆ. ಎಲ್ಲಿಯೂ ಸಲ್ಲದ, ತಮ್ಮದೇ ಒಂದು ಜಗತ್ತನ್ನು ಕಟ್ಟಿಕೊಂಡಿರುವ, ಅಲ್ಲಿಯೂ ನೆಮ್ಮದಿ ಮರೀಚಿಕೆಯಾದ ಟ್ರಾನ್ಸ್‌ಜೆಂಡರ್ ಅಳಲನ್ನು ಇಲ್ಲಿ ತೋರಿಸಲಾಗಿದೆ.

ಪೂರ್ಣಪ್ರಮಾಣದ ಸಿನಿಮಾ ಇರಲಿ, ಕಿರುಚಿತ್ರವೇ ಆಗಿರಲಿ, ಕಥನದ ಚಕ್ರ ತುಂಬ ಮುಖ್ಯ. ಇಡೀ ಸಿನಿಮಾಗೆ ಚಲನೆ ಕೊಡುವುದು ಆ ಚಕ್ರವೇ. ಸಂದೇಶ, ನಟನೆ, ತಾಂತ್ರಿಕ ಬಿಗಿತನ, ಸಂಗೀತ, ಸಂಭಾಷಣೆ ಈ ಎಲ್ಲವೂ ಆ ಕಥನದ ಪ್ರಭಾವವನ್ನು ಹೆಚ್ಚಿಸುತ್ತ ಹೋಗುತ್ತವಷ್ಟೆ. ಕಥನಹಂದರವೇ ಶಿಥಿಲವಾಗಿದ್ದರೆ ಉಳಿದೆಲ್ಲವೂ ಆ ಹಂದರವನ್ನು ಮುರಿದುಹಾಕುವ ಸಲಕರಣೆಗಳಾಗುತ್ತವಷ್ಟೆ.

'ಕಿನ್ನರ್' ಕಿರುಚಿತ್ರದಲ್ಲಿಯೂ ಕಥನದ ಹಂದರ ಶಿಥಿಲವಾಗಿದೆ. ಇಲ್ಲಿ ಟ್ರಾನ್ಸ್‌ಜೆಂಡರ್ ನಿರೂಪಣೆಯಲ್ಲಿಯೇ ಇಡೀ ಕಿರುಚಿತ್ರ ಸಾಗುತ್ತದೆ. ಅವಳು ತನ್ನ ಬದುಕಿನ ಬಗ್ಗೆ, ಖುಷಿಕೊಡುವ ಸಂಗತಿಗಳ ಬಗ್ಗೆ, ಸುತ್ತಲಿನ ಸಮಾಜದ ಬಗ್ಗೆ, ಅಲ್ಲಿ ತನ್ನನ್ನು ನೋಡುವ ರೀತಿಯ ಬಗ್ಗೆ, ಅದರಿಂದ ಅನುಭವಿಸುವ ಅವಮಾನದ ಬಗ್ಗೆಯೆಲ್ಲ ಹೇಳಿಕೊಳ್ಳುತ್ತ ಹೋಗುತ್ತಾಳೆ. 'ನಾನೂ ನಿಮ್ಮಂತೆ ಒಬ್ಬಳು. ನನ್ನನ್ನೂ ಈ ಜಗತ್ತಿನಲ್ಲಿ ಸಹಜವಾಗಿ ಬದುಕಲು ಬಿಡಿ' ಎಂದು ಕೇಳಿಕೊಳ್ಳುವುದರ ಮೂಲಕ ಕಿರುಚಿತ್ರ ಮುಗಿಯುತ್ತದೆ.

**ಹೆಸರು:** ಕಿನ್ನರ್
**ನಿರ್ದೇಶನ/ ನಿರ್ಮಾಣ:** ಸಾಹಿಲ್ ಮಾಂಕು
**ಛಾಯಾಗ್ರಹಣ:** ಆಶಿಸ್ ಸಾವಂತ್
**ನಟನೆ:** ಸಾಹಿಲ್ ಮಾಂಕು
**ಸಂಕಲನ /ಧ್ವನಿ ವಿನ್ಯಾಸ:** ವಿವೇಕ್ ಕೌಂಡಲ್

ಇಲ್ಲಿ ಎಲ್ಲವನ್ನೂ ಹೇಳಿಬಿಡುವ ಮಾತಿನ ವ್ಯಸನದಿಂದಲೇ ಕಥನ ನಿಸ್ತೇಜವಾಗಿದೆ. ದೃಶ್ಯಮಾಧ್ಯಮ ಮೊದಲು ನೋಡುವ ಮಾಧ್ಯಮ. ನಾವು ಪ್ರೇಕ್ಷಕರಿಗೆ ಏನನ್ನು ತೋರಿಸಬೇಕು, ಎಷ್ಟು ತೋರಿಸಬೇಕು, ಏನನ್ನು ತೋರಿಸಬಾರದು ಮತ್ತು ಹಾಗೆ ತೋರಿಸುವ – ತೋರಿಸದೇ ಇರುವ ತಂತ್ರಗಳಿಂದ ಚಿತ್ರ ಅವರ ಮನಸೊಳಗೆ ಹೇಗೆ ಬೆಳೆಯುವಂತೆ ಮಾಡಬೇಕು ಎಂಬ ತಿಳಿವಳಿಕೆ ನಿರ್ದೇಶಕನಿಗೆ ಬೇಕೇ ಬೇಕು. ಈ ತೋರಿಸುವ ಮತ್ತು ತೋರಿಸದಿರುವ ಕಣ್ಣಾಮುಚ್ಚಾಲೆ ಆಟಕ್ಕೆ ಪೂರಕವಾಗಿ ಸಂಭಾಷಣೆಗಳು ಇರುತ್ತವೆ; ಇರಬೇಕು. ಆದರೆ ಇಲ್ಲಿ ಮಾತೇ ಎಲ್ಲವನ್ನು ಆಳುತ್ತಿದೆ. ಅದನ್ನು ಅನುಸರಿಸಿಕೊಂಡು ದೃಶ್ಯಗಳು ಹೋಗುತ್ತಿವೆ. ಹೀಗಾಗಿಯೇ ಇದರಲ್ಲಿ ಇರುವ ಹಲವು ಭಾವತೀವ್ರ ಸನ್ನಿವೇಶಗಳೂ ಮಾತಿನ ಮೇಲಾಟದಲ್ಲಿ ನಿಸ್ತೇಜವಾಗಿ ದಾಟಿಹೋಗುತ್ತವೆ.

ರೈಲ್ವೆ ನಿಲ್ದಾಣದಲ್ಲಿ ಅಕ್ಕಪಕ್ಕವೇ ಇರುವ ಸ್ತ್ರೀ ಮತ್ತು ಪುರುಷ ಶೌಚಾಲಯಗಳಲ್ಲಿ ಯಾವುದಕ್ಕೆ ಹೋಗುವುದು ಎಂಬ ಗೊಂದಲದಲ್ಲಿ ಟ್ರಾನ್ಸ್‌ಜೆಂಡರ್ ನಿಲ್ಲುವುದು ಅಂಥ ತೀವ್ರ ಸನ್ನಿವೇಶಗಳಲ್ಲಿ ಒಂದು. ಅದನ್ನು ದೃಶ್ಯದಲ್ಲಿಯೇ ಅತ್ಯಂತ ಪ್ರಭಾವಶಾಲಿಯಾಗಿ ಪ್ರತಿಬಿಂಬಿಸಬಹುದು. ಆದರೆ ನಿರ್ದೇಶಕರು ಅಲ್ಲಿಯೂ ಮಾತಿನ ಹಾವಳಿ ನಡೆಸುತ್ತಾರೆ. ಹಾಗಾಗಿ ದೃಶ್ಯದ ಭಾವಕ್ಕಿಂತ ಮಾತಿನ ಇರಿತವೇ ಹೆಚ್ಚಾಗಿ ನಮಗೆ ಆ ಸನ್ನಿವೇಶದ ತೀವ್ರತೆ ತಾಗುವುದೇ ಇಲ್ಲ.

ಟ್ರಾನ್ಸ್‌ಜೆಂಡರ್‌ಗಳ ಬದುಕಿನ ದಿನಚರಿಯನ್ನು ಹೇಳಿದಂತಿರುವುದೂ ಈ ಕಿರುಚಿತ್ರದ ಮಿತಿಗಳಲ್ಲೊಂದು. ಸಿನಿಮಾ ಸಾರ್ವತ್ರಿಕ ಅನುಭವ ಆಗಬೇಕು ಎಂಬುದು ನಿಜ. ಆದರೆ ಅದು ವ್ಯಕ್ತಿ, ಪಾತ್ರದ ವೈಯಕ್ತಿಕ ಅನುಭವವಾಗಿಯೇ ಸಾರ್ವತ್ರಿಕವಾಗಬೇಕು. ಭಾರತ ದೇಶದಲ್ಲಿ ಭ್ರಷ್ಟಾಚಾರ ಇದೆ ಎಂದು ಭಾಷಣ ಬಿಗಿಯುವುದಕ್ಕೂ, ಭ್ರಷ್ಟಾಚಾರಕ್ಕೆ ಒಳಗಾಗಿ ತನ್ನ ಬದುಕನ್ನು ಕಳೆದುಕೊಂಡ ವ್ಯಕ್ತಿಯೊಬ್ಬನ ಬದುಕಿನ ಕಥನದ ಮೂಲಕ ಅದನ್ನೇ ಬಿಂಬಿಸುವುದಕ್ಕೂ ವ್ಯತ್ಯಾಸವಿದೆಯಲ್ಲವೇ? ಆ ವ್ಯತ್ಯಾಸ ಈ ಕಿರುಚಿತ್ರದ ನಿರ್ದೇಶಕರ ಮನಸ್ಸಿಗೆ ಬಂದಂತಿಲ್ಲ.

ಈ ಕಿರುಚಿತ್ರ ವೀಕ್ಷಣೆಗೆ **bit.ly/3vLiQOs** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.